ನಡೆಯುತ್ತಿವೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್.ಎ.ರವೀಂದ್ರನಾಥ್: ನಮ್ಮ ದಾವಣಗೆರೆ ತಾಲ್ಲೂಕಿನ ಎಲ್ಲಾ ಪದವಿಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡವಿದೆ ಎಂದು ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ಮಾಯಕೊಂಡ, ಕೊಡಗನೂರು, ಕಕ್ಕನಕೊಳ್ಳ ಲೋಕಿಕೆರೆ ಇಲ್ಲಿ ಹಾಲಿ ಬಿಲ್ಡಿಂಗ್ ಕೆಲಸ ಪ್ರಾರಂಭ ಮಾಡಿದರು. ಇದುವರೆವಿಗೂ ಕೆಲಸ ಪೂರ್ತಿಯಾಗಿಲ್ಲ. ಅದೇ ರೀತಿ ದೊಡ್ಡಬಾತಿ ಹಾಗೂ ಕುಕ್ವಾರದಲ್ಲೂ ಕಾಲೇಜುಗಳಿದ್ದಾವೆ, ಅಲ್ಲಿ ಟೆಂಡರ್ ಕರೆದು ಎಲ್ಲಾ ಮಾಡಿದರೂ ಕೂಡ ಎರಡು ವರ್ಷದಿಂದ ಯಾವುದೇ ರೀತಿಯ ಕೆಲಸ ಪ್ರಾರಂಭವಾಗಿಲ್ಲ. ಆದುದರಿಂದ ಇವರು ತಮ್ಮ ಎಲ್ಲಾ ಕಾಲೇಜುಗಳಿಗೆ ಕಟ್ಟಡಗಳಿದ್ದಾವೆಂದು ಹೇಳಿದ್ದಾರೆ, ಅದರ ಬಗ್ಗೆ ನನಗೆ ಉತ್ತರ ನೀಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸ್ನೇಹಿತರು ಕಟ್ಟಡಗಳ ಅವಶ್ಯಕತೆ ಇದ್ದಾವೆಂದು ಏನು ಹೇಳಿದ್ದಾರೆ, ಅಲ್ಲಿ ಪೂರೈಸಲಾಗುವುದು. ಲೋಕೋಪಯೋಗಿ ಮಂತ್ರಿಗಳು, ಕಾರ್ಯದರ್ಶಿಗಳು ಹಾಗೂ ಮುಖ್ಯ ಇಂಜಿನಿಯರ್‌ರವರನ್ನು ಕರೆಯಿಸಿ ಎಲ್ಲೆಲ್ಲಿ ಹಣದ ಅವಶ್ಯಕತೆ ತಕ್ಷಣ ಇರುವುದಿಲ್ಲ, ಅಲ್ಲಿಂದ ಹಣವನ್ನು ತೆಗೆದುಕೊಂಡು ಎಲ್ಲೆಲ್ಲಿ ಸ್ಟಿಲ್ ಓವರ್ ವರ್ಕ್ಸ್ ಮಾಡುವುದಕ್ಕೆ ಸಾಧ್ಯತೆ ಇದೆಯೋ ಅದನ್ನು ಮಾಡುವ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ. ಬೇರೆ ಕಡೆಗೆ ಹೋಲಿಸಿ ನೋಡಿದರೆ, ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಕಟ್ಟಡದ ಸಮಸ್ಯೆ ಅಷ್ಟು ಪ್ರಮಾಣದಲ್ಲಿ ಇಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ್: ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಅರ್ಧಂಬರ್ಧ ವಾಗಿರುವ ಬಿಲ್ಡಿಂಗಳೇ ಜಾಸ್ತಿ ಇದ್ದಾವೆ. ಹತ್ತು ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಮಾತ್ರ ಆ ಕಟ್ಟಡ ಪೂರ್ತಿಯಾಗುತ್ತವೆ. ಆದರೆ ಆ ಕಟ್ಟಡವನ್ನು ಇದೇ ರೀತಿಯಲ್ಲಿ ಬಿಟ್ಟರೆ ಮತ್ತೆ ಅವೂ ಕೂಡ ಬೀಳುವಂಥ ಸ್ಥಿತಿಗೆ ಬರುತ್ತವೆ. ಅದಕ್ಕೆ ದಯಮಾಡಿ ಶಿಕ್ಷಣ ಸಚಿವರು ಇದರ ಬಗ್ಗೆ ಗಮನಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ನಾಳೆದಿವಸ ಸಭೆಯನ್ನು ಕರೆದಿದ್ದೇನೆ. ಎಲ್ಲೆಲ್ಲಿ ಸ್ಟಿಲ್ ಓವರ್ ವರ್ಕ್ಸ್ ಇದೆ ಅವಕ್ಕೆ ಹಣವನ್ನು ಒದಗಿಸಿ ಅದಷ್ಟು ಜಾಗ್ರತೆ ಕಟ್ಟಡ ಕಟ್ಟುವುದಕ್ಕೆ ಪ್ರಯತ್ನಿಸುತ್ತೇನೆ.

ವಿಷಯ: ಕಾಪು ವಿಧಾನಸಭಾ ಕ್ಷೇತ್ರಕ್ಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು.

228 (1349)

ಶ್ರೀ ವಸಂತ ವಿ.ಸಾಲಿಯಾನ (ಕಾಪು): ಮಾನ್ಯ ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಾಪು ಕ್ಷೇತ್ರದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಯಾವಾಗ ಪ್ರಾರಂಭವಾಯಿತು?

2) ಕಾಲೇಜು ಸ್ವಂತ ಕಟ್ಟಡವನ್ನು ಹೊಂದಿದೆಯೇ? ಇಲ್ಲವಾದಲ್ಲಿ ತರಗತಿಗಳು ಈಗ ಎಲ್ಲಿ ನಡೆಯುತ್ತಿವೆ?

3) ಕಾಲೇಜು ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿರುತ್ತದೆ?

4) ಸರ್ಕಾರದಿಂದ ಸ್ವಂತ ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆಯೇ? ನೀಡಿದ್ದಲ್ಲಿ ಬಿಡುಗಡೆಯಾದ ಹಣ ಎಷ್ಟು ಮತ್ತು ಕಟ್ಟಡವನ್ನು ಯಾವಾಗ ಸಂಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಜಿ.ಗೋವಿಂದೆಗೌಡ (ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು):

1) 1992-93ರಲ್ಲಿ ಪ್ರಾರಂಭಿಸಲಾಗಿದೆ.

2) ಇಲ್ಲ, ಕಾಲೇಜು ತರಗತಿಗಳನ್ನು ತಾತ್ಕಾಲಿಕವಾಗಿ ಕಾಪುನಲ್ಲಿನ ಶ್ರೀ ಹಳೇ ಮಾರಿಯಮ್ಮ ದೇವಸ್ಥಾನದ ಪಾಳಿಯಲ್ಲಿ ನಡೆಸಲಾಗುತ್ತಿದೆ.

3) ಕಾಲೇಜು ಕಟ್ಟಡ ನಿರ್ಮಾಣಕ್ಕಾಗಿ 1996-97ನೇ ಸಾಲಿನಲ್ಲಿ ರೂ.12.00 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಲೋಕೋಪಯೋಗಿ ಇಲಾಖೆಯ ಅಪೆಂಡಿಕ್ಸ್ - ಇ ಯಂತೆ 1997-98ನೇ ಸಾಲಿನಲ್ಲಿ ರೂ.5.00 ಲಕ್ಷಗಳು ನಿಚ್ಚವಾಗಿರುತ್ತದೆ ಹಾಗೂ 1998-99ನೇ ಸಾಲಿಗೆ 2.45 ಲಕ್ಷಗಳು ನಂಚಿಕೆಯಾಗಿರುತ್ತದೆ.

4) ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ಹಂತ ಹಂತವಾಗಿ ಪೂರ್ಣಗೊಳಿಸಲಾಗುವುದು.

ಶ್ರೀ. ವಸಂತ ವಿ.ಸಾಲಿಯಾನ: ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷದಿಂದ ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ. 1992-93ನೇ ಇಸವಿಯಲ್ಲಿ ಈ ಪ್ರಥಮದರ್ಜೆ

ಕಾಲೇಜು ಆರಂಭವಾಯಿತು ಮತ್ತು 1994 ರಲ್ಲಿ ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ದೊರಕಿ ಶಂಕುಸ್ಥಾಪನೆಯನ್ನೂ ಕೂಡ ಹಾಕಲಾಯಿತು. ಆದರೆ ಈ ವರ್ಷ ಇದಕ್ಕೆ ಹಣ ಒದಗಿಸಿದ್ದಾರೆ, ಕೆಲಸ ಪ್ರಾರಂಭವಾಗಿದೆ. ಸಿಮೆಂಟ್ ಮತ್ತು ಸ್ಟೀಲ್ ಕೊಡದಿರುವುದರಿಂದ ಕೆಲಸ ನಿಂತಿದೆ. ಇವರು 5 ಲಕ್ಷ ರೂ. ಖರ್ಚು ಮಾಡಿದ್ದಾರೆಂದು ಹೇಳಿದ್ದಾರೆ, 5 ಲಕ್ಷ ರೂ.ನಲ್ಲಿ ಒಂದು ನಯಾ ಪೈಸೆಯೂ ಕೂಡ ಖರ್ಚಾಗಿಲ್ಲ. ಆದಕ್ಕೆ ಆಯವ್ಯಯ ಸಿಕ್ಕಿಲ್ಲ, ಸಿಮೆಂಟ್ ಕೊಡಬೇಕೆಂದು ಕೇಳಿದರೆ ಸಿಮೆಂಟನ್ನು ಕೂಡ ಕೊಡುತ್ತಿಲ್ಲ, ಸ್ಟೀಲ್ ಕೊಡಬೇಕೆಂದು ಕೇಳಿದರೆ ಅದನ್ನೂ ಕೂಡ ಕೊಡುತ್ತಿಲ್ಲ. ಅಧ್ಯಕ್ಷರ ಮುಖೇನ ಮಾನ್ಯ ಸಚಿವರಲ್ಲಿ ನಾನು ಕಳಕಳಿಯಿಂದ ಕೇಳುವುದೇನೆಂದರೆ, ನಾಳೆಯೇ ಸಿಮೆಂಟ್ ಹಾಗೂ ಸ್ಟೀಲ್ ಒದಗಿಸಿ ಕೆಲಸ ಪ್ರಾರಂಭವಾಗಿ ಕನಿಷ್ಟಪಕ್ಷ ಈ ವಷರ ಐದಾರು ತರಗತಿಗಳ ಕೊಠಡಿಗಳನ್ನಾದರೂ ಪೂರ್ಣಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಅಧ್ಯಕ್ಷರು, 12 ಲಕ್ಷ ರೂ. ಎಸ್ಟಿಮೇಟ್ ಕಾಸ್ಟ್ ಆಗಿ, ಆಡಳಿತಾತ್ಮಕವಾದ ಮಂಜೂರಾತಿ ದೊರೆತಿರತಕ್ಕಂಥದ್ದು ಕಳೆದ ವರ್ಷ ಇದಕ್ಕೆ 5 ಲಕ್ಷ ರೂ. ಆಯವ್ಯಯವನ್ನು ಒದಗಿಸಲಾಗಿತ್ತು, ಇದು ಖರ್ಚಾಗಿದೆ ಎಂದು ಲೋಕೋಪಯೋಗಿ ಇಲಾಖೆಯಿಂದ ಬಂದಿದೆ. ಬಹುಶಃ ಅವರು ಸಿಮೆಂಟ್ ಹಾಗೂ ಸ್ಟೀಲ್ ಖರೀದಿ ಮಾಡಿ ಇಟ್ಟುಕೊಂಡು, ಕೆಲಸ ಪ್ರಾರಂಭ ಮಾಡಬಹುದು. ಏನೇ ಆದರೂ ನಾಳೆ ಅವರನ್ನು ಸಭೆಗೆ ಕರೆಯಿಸುತ್ತಿದ್ದೇನೆ. ಈ ಎಲ್ಲಾ ವಿಷಯಗಳನ್ನು ಕೂಲಂಕಷವಾಗಿ ವಿಚಾರಣೆ ಮಾಡಿ ಎಲ್ಲೆಲ್ಲಿ ಕಾಲೇಜುಗಳಲ್ಲಿ ಸ್ಟಿಲ್‌ಓವರ್ ವರ್ಕ್ಸ್ ಇದ್ದಾವೆ ಮೊದಲು ಅದಕ್ಕೆ ಪ್ರಾತಿನಿಧ್ಯ ಕೊಟ್ಟು ಕೆಲಸ ಆರಂಭ ಮಾಡುವುದಕ್ಕೆ ಹೇಳುತ್ತೇನೆ.

ವಿಷಯ: ಜಿಲ್ಲಾ ಪಂಚಾಯತ್ ಸದಸ್ಯರಿಗೆ ಮಾಸಿಕ ಗೌರವಧನ.

229 (1696)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತಿ ಸದಸ್ಯರಿಗೆ ಮಾಸಿಕ ವೇತನ ನಿಗಧಿಪಡಿಸಲಾಗಿದೆಯೇ?

ಆ) ವೇತನವನ್ನು ನಿಗಧಿಪಡಿಸಿದ್ದರೆ, ಯಾವ ದಿನಾಂಕದಂದು ಜಾರಿಗೊಳಿಸಲಾಗಿದೆ?

ಇ) ಜಿಲ್ಲಾ ಪಂಚಾಯತ್ ಸದಸ್ಯರು 1995 ಮೇ ತಿಂಗಳಿಂದ ಮಾಸಿಕ ಗೌರವಧನ ಪಡೆಯದ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?